2103 (1811) ಶ್ರೀ ಕಾರಜೋಳ ಗೋವಿಂದ್ ಮಕಟಪ್ಪ (ಮುಧೋಳ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆಯ ಮೊಧೋಳ್ ತಾಲ್ಲೂಕಿನಲ್ಲಿ ಕಳೆದ 5 ವರ್ಷಗಳಿಂದ ರಸ್ತೆ ನಿರ್ವಹಣೆಗೆ ಖರ್ಚಾದ ಮೊತ್ತವೆಷ್ಟು: (ಪ್ರತಿಯೊಂದು ರಸ್ತೆವಾರು ವಿವರ ನೀಡುವುದು);

ಆ) ಕಳೆದ 5 ವರ್ಷಗಳಿಂದ ನಿರ್ವಹಣೆ ಇಲ್ಲದೆ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದರೆ ವಿಶೇಷ ದುರಸ್ತಿಗೆ ಸರ್ಕಾರ ಕೂಡಲೇ ಹಣ ಬಿಡುಗಡೆ ಮಾಡಲು ಕ್ರಮಗೊಳ್ಳಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬಾಗಲ್‌ಕೋಟೆ ಜಿಲ್ಲೆಯ ಮುಧೋಳ್ ತಾಲ್ಲೂಕಿನಲ್ಲಿ ಕಳೆದ 5 ರ್ಷಗಳಿಂದ ರಸ್ತೆ ನಿರ್ವಹಣೆಗೆ ಖರ್ಚಾದ ಮೊತ್ತವು ಈ ಕೆಳಗಿನಂತಿರುತ್ತದೆ:

ರಸ್ತೆ	ವರ್ಷವಾರು ವೆಚ್ಚದ ವಿವರ				
	1999–2000	2000–01	2001–02	2002–03	2003–04
ರಾಜ್ಯ ಹೆದ್ದಾರಿಗಳು	49.59	40.18	12.59	11.20	13.53
ಜಿಲ್ಲಾ ಮುಖ್ಯ ರಸ್ತೆಗಳು	39.82	28.81	29.78	26.71	26.72

ಆ) ಪ್ರತಿ ವರ್ಷವು ಆಯವ್ಯಯದಲ್ಲಿ ಒದಗಿಸಲಾದ ಅನುದಾನಕ್ಕೆ ಅನುಗುಣವಾಗಿ ಹಾಗೂ ಅವ್ಯಕತೆಗೆ ಮೇರೆಗೆ ಕಾರ್ಯಕ್ರಮ ರೂಪಿಸಿಕೊಂಡು ರಸ್ತೆ ನಿರ್ವಹಣೆ ಮಾಡಿ ರಸ್ತೆಗಳನ್ನು ಸುಸ್ಥಿತಿಯಲ್ಲಿ ಇಡಲಾಗಿದೆ. ಇದರಂತೆ 2004–05ನೇ ಸಾಲಿನಲ್ಲೂ ಜಿಲ್ಲಾ ಮುಖ್ಯ ರಸ್ತೆಗಳ ಹಾಗೂ ರಾಜ್ಯ ಹೆದ್ದಾರಿಗಳ ತಗ್ಗು ತುಂಬುವ ಕೆಲಸವು ಮುಕ್ತಾಯಹಂತದಲ್ಲಿದ್ದು ಮಾರ್ಚ್ 2005ರ ಅಂತ್ಯಕ್ಕೆ ಪೂರ್ತಿಗೊಳಿಸಲಾಗುವುದು. ಇದಲ್ಲದೇ ಮುಧೋಳ್ ತಾಲ್ಲೂಕಿನ ರಾಜ್ಯ ಹೆದ್ದಾರಿಗಳನ್ನು ಏಪ್ರಿಲ್ 2005 ರಿಂದ 3 ವರ್ಷಗಳ ನಿರ್ವಹಣೆಗಾಗಿ (2005–2008) ಕೆ.ಆರ್.ಡಿ.ಸಿ.ಎಲ್ ಗೆ ಹಸ್ತಾಂತರಿಸಲಾಗುವುದು.

2107 (1937) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವನಸಮುದ್ರ ಗಗನಚುಕ್ಕಿ ಹಾಗೂ ಭರಚುಕ್ಕಿ ಜಲಪಾತವನ್ನು ಪ್ರವಾಸಿ ಆಕರ್ಷಕ ತಾಣವನ್ನಾಗಿ ಪರಿವರ್ತಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಡಿ.ಜಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು)

ಅ) ಶಿವನಸಮುದ್ರದಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಉಪಹಾರ ಗೃಹವನ್ನು ನಿರ್ಮಿಸಿ ಲೀಸ್ ಆಧಾರದ ಮೇಲೆ ಖಾಸಗಿಯವರಿಗೆ ವಹಿಸಲಾಗಿದೆ ಹಾಗೂ ಪ್ರವಾಸಿಗರಿಗೆ ಶಿವನಸಮುದ್ರ ಬಗ್ಗೆ ಮಾಹಿತಿಯನ್ನು ಒದಗಿಸಲಾಗುತ್ತಿದೆ.